ಒಳಪಡಿಸಿ ಅದರಲ್ಲಿ ಎಷ್ಟೆಷ್ಟು N.P.K. ಕಂಟೆಂಟ್ಸ್ ಇದೆ ಎಂಬುದನ್ನು ಪತ್ತೆಹಚ್ಚಿ ಕಡಿಮೆ ಇರುವ ಅಂಶವನ್ನು ನೇರವಾದ ರಾಸಾಯನಿಕ ಗೊಬ್ಬರದೊಡನೆ ಮಿಲನ ಮಾಡಿ ಉಪಯೋಗಿಸಿದರೆ ತುಂಬ ಒಳ್ಳೆಯ ಫಸಲು ಬರುವ ಸಂಭವ ಇದೆ, ಜೊತೆಗೆ ಕೆರೆಯಲ್ಲಿ ನೀರೂ ಚನ್ನಾಗಿ ತುಂಬುವುದಕ್ಕೆ ಅನುಕೂಲ ವಾಗುತ್ತದೆ, ಆದ್ದರಿಂದ ಈ ಮಣ್ಣನ್ನು ಹೊರತೆಗೆಸಿ ರೈತರು ಉಪಯೋಗಿಸುವಂತೆ ತಿಳುವಳಿಕೆ ಕೊಟ್ಟರೆ ಕಾಲಕ್ರಮೇಣ ಅವರುಗಳು ತಾವಾಗಿಯೇ ಮಣ್ಣನ್ನು ತೆಗೆದುಕೊಂಡು ಹೋಗಿ ತಮ್ಮ ತಮ್ಮ ಜಮೀನುಗಳಿಗೆ ಹಾಕಿಕೊಳ್ಳುತ್ತಾರೆ. ಇದನ್ನು ಪ್ರಾಯೋಗಿಕವಾಗಿಯಾದರೂ ಕೆಲವು ಕಡೆ ಮಾಡಿ ನೋಡಬೇಕೆಂದು ಹೇಳುತ್ತೇನೆ. ಹೀಗೆ ಕೆರೆಗೆ ನೀರು ಬರುವಾಗ ಮಣ್ಣನ್ನು ಹೊತ್ತುಕೊಂಡು ಬರುವುದನ್ನು ತಪ್ಪಿಸುವ ಸಲುವಾಗಿ ನೀರು ಬರತಕ್ಕ ಕಡೆಗಳಲ್ಲಿ ಮತ್ತು ಕೆರೆಯ ಅಂಗಳದಲ್ಲಿ ಮರಗಳನ್ನು ಹಾಕಿದರೆ ಭೂಮಿಯ ಕೊರೆತವೂ ತಪ್ಪಿ ಕೆರೆಗೆ ಮಣ್ಣು ಸೇರುವುದೂ ತಪ್ಪುತ್ತದೆ. ಈಗಾಗಲೇ ಕೆರೆಗಳಲ್ಲಿ ಹೂಳು ತುಂಬಿರುವುದನ್ನು ತೆಗೆದು ಜಮೀನುಗಳಿಗೆ ಉಪಯೋಗಿಸುವಂತೆ ವ್ಯವಸಾಯ ಇಲಾಖೆಯವರು ರೈತರಿಗೆ ಸೂಕ್ತ ತಿಳುವಳಿಕೆ ನೀಡಬೇಕೆಂದು ತಮ್ಮ ಮೂಲಕ ಅರಿಕೆ ಮಾಡಿಕೊಳ್ಳುತ್ತೇನೆ. ಇದಲ್ಲದೆ ಕೆಲವು ಊರುಗಳಲ್ಲಿ ನೂರಾರು ವರ್ಷಗಳ ಹಿಂದೆ ಕೆರೆಗಳೆಲ್ಲ ಹಾಳಾಗಿ ಹೂಳು ತುಂಬಿಕೊಂಡು ಆ ಪ್ರದೇಶದಲ್ಲಿದ್ದ ಜಮೀನಿನಲ್ಲೆಲ್ಲ ಕಾಡು ಬೆಳೆದು ಉಪಯೋಗಕ್ಕೆ ಬಾರದಿದ್ದಂತಹ ಸಂದರ್ಭಗಳಿದ್ದವು. ಈಗ ಸ್ವಲ್ಪ ಕಾಲದ ಹಿಂದೆ ಭೂಮಿಗೆ ಸ್ವಲ್ಪ ಅನಾನುಕೂಲ ವಾದಾಗ ಹಳ್ಳಿಯ ಕೆಲವು ಜನಗಳು ಆ ಭೂಮಿಯನ್ನು ಆಕ್ರಮಿಸಿಕೊಂಡು ಕೆರೆಗಳನ್ನು ರಿಪೇರಿ ಮಾಡಿಸಿಕೊಂಡು ಕೆಲವಾರು ಕೆರೆ ಏರಿಯಾ ಕೆಳಗಡೆ ಜಮೀನನ್ನು ಸಾಗು ಮಾಡಿಕೊಂಡು ಅದು ತಮ್ಮದೇ ಜಮೀನು, ತಮ್ಮದೇ ಕೆರೆ ಎಂದು ಬೇರೆ ಹೊಸದಾಗಿ ಮಾಡತಕ್ಕ ಜಮೀನ್ದಾರರಿಗೆ ನೀರು ದೊರೆಯದಂತೆ ಮಾಡುತ್ತಿರತಕ್ಕ ಸಂದರ್ಭಗಳು ಇವತ್ತಿನ ದಿವಸ ಇವೆ ಆದ್ದರಿಂದ, ಅಂಥ ತೊಂದರೆಗಳನ್ನು ತಪ್ಪಿಸಿ, ಆ ಕೆರೆಗಳ ಕೆಪ್ಯಾಸಿಟಿ ಏನಿದೆ ಅದರಿಂದ ಎಷ್ಟು ಎಕರೆ ಜಮೀನಿಗೆ ನೀರನ್ನೊದಗಿಸಬಹುದೆಂಬುದನ್ನು ತಿಳಿದು ಅಕ್ಕಪಕ್ಕದ ಜಮೀನ್ದಾರರೆಲ್ಲರಿಗೂ ನೀರನ್ನೊದಗಿಸತಕ್ಕ ಏರ್ಪಾಡನ್ನು ಮಾಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

೭–೦೦ ಪಿ.ಎಂ.

ಇನ್ನು ಸರ್ಕಾರಿ ನೌಕರರನ್ನು ಅನೇಕ ವೇಳೆ ಅದರಲ್ಲೂ ಹರಿಜನ ಗಿರಿಜನರನ್ನು ಯಾವುದಾದರೂ ಊರಿಗೆ ವರ್ಗ ಮಾಡಬೇಕಾದರೆ ದಯವಿಟ್ಟು ಮನೆಗಳಿರುವ ಸ್ಥಳಗಳಿಗೆ ವರ್ಗ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಅವರ ಕಷ್ಟವನ್ನು ಕಣ್ಣಾರೆ ಕಾಣದೆ ಹೋದರೂ ಕಿವಿಯಾರೆ ಕೇಳಿರುವುದಂತು ನಿಜ. ಅನೇಕ ವೇಳೆ ಅಂಥ ದೂರುಗಳು ಬಂದಿವೆ. ಎಲ್ಲ ಕಡೆಯು ಮನೆಯ ಸೌಕರ್ಯಗಳಿದ್ದರೆ ಎಲ್ಲಿಗಾದರೂ ಹಾಕಿ ಎಂದು ಹೇಳಬಹುದು. ಆದರೆ ಮನೆಗಳು ಇಲ್ಲದೇ ಇರುವ ಜಾಗಕ್ಕೆ ಅವರನ್ನು ಹಾಕಿದರೆ ನಿಜವಾಗಿಯೂ ಅವರಿಗೆ ಬಹಳ ತೊಂದರೆ ಕೊಟ್ಟಾಂತ್ಯಾಗುತ್ತದೆ. ಈ ಬಗ್ಗೆ ಎಲ್ಲಾ ಇಲಾಖೆಯ ಅಧಿಕಾರಿಗಳೂ ಸ್ವಲ್ಪ ದಯಾಮಯ ಹೃದಯ ದಿಂದ ಪರಿಶೀಲಿಸಿ ಯಾವ ಜಾಗದಲ್ಲಿ ಮನೆ ಇಲ್ಲ ಎಂದು ತಿಳಿದುಬರುತ್ತದೋ ಅಂತಹ ಜಾಗಗಳಿಗೆ ಇವರನ್ನು ವರ್ಗ ಮಾಡದೇ ಮನೆಗಳಿರುವ ಕಡೆ ವರ್ಗ ಮಾಡಿದರೆ ಉಪಕಾರ ಮಾಡಿದಂತಾಗುತ್ತದೆ. ಈ ಸಮಸ್ಯೆ ಬಹಳ ದೊಡ್ಡ ಸಮಸ್ಯೆಯಾಗಿದೆ. ಇಂಜಿನಿಯರುಗಳಿಗೆ ಬಡ್ತಿ ಕೊಡತಕ್ಕ ವಿಚಾರದಲ್ಲಿ ಸರ್ಕಾರಿ ಆಜ್ಞೆ ಆಗಿ ಮೂರು ನಾಲ್ಕು ತಿಂಗಳಾದರೂ ಸಹ ಆ ವಿಚಾರದಲ್ಲಿ ಸರ್ಕಾರದವರು ಕಾರ್ಯಕ್ರಮ ತೆಗೆದುಕೊಂಡು ಆಜ್ಞೆಯನ್ನು ಜಾರಿಗೆ ಕೊಡುವ ಏರ್ಪಾಡು ಮಾಡಿಲ್ಲ. ಅದನ್ನು ಈಗಲಾದರೂ ದಯವಿಟ್ಟು ಬೇಗನೆ ಮಾಡಿದರೆ ಆಸೆಯಿಂದ ಕಾಯುತ್ತಾ ಕುಳಿತಿರುವ ಇಂಜಿನಿಯರುಗಳಿಗೆ ಸಂತೋಷವಾಗುತ್ತದೆ ಎಂದು ಹೇಳಿ ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಂಡು ನನಗೆ ಮಾತನಾಡುವುದಕ್ಕೆ ಅವಕಾಶವನು ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Election to the D.C.C. Bank Gulbarga

ಶ್ರೀ ಗೋವಿಂದ ಪಿ. ಒಡೆಯರಾಜ್.—ಮಾನ್ಯ ಅಧ್ಯಕ್ಷರೇ, ತಾವು ಆಜ್ಞೆ ಮಾಡಿದರೂ ಕೂಡ ಗುಲ್ಬರ್ಗ ಡಿ.ಸಿ.ಸಿ. ಬ್ಯಾಂಕ್ ಚುನಾವಣೆ ಬಗ್ಗೆ ಸರ್ಕಾರದವರು ಸ್ಟೇಟ್‌ಮೆಂಟ್ ಮಾಡಿಲ್ಲ ಇದರಿಂದ ಸರ್ಕಾರದ ದುರುದ್ದೇಶ ಎಷ್ಟರಮಟ್ಟಿಗೆ ಚುನಾವಣೆ ಬಗ್ಗೆ ಇದೆ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತಿದೆ. ಅಲ್ಲಿನ ಕಾರ್ಯದರ್ಶಿಯವರು ಪತ್ರ ಬರೆದು ಮಾರ್ಗದರ್ಶನ ಕೊಡಿ ಎಂದು ಕೇಳಿದ್ದಾರೆ. ಅವರು ಮಾರ್ಗದರ್ಶನ ಕೇಳಿದ್ದಾರೆ, ಸಭೆಯಲ್ಲೂ ಚರ್ಚೆಯಾಗಿದೆ. ತಾವೂ ಕೂಡ ಸ್ಟೇಟ್‌ಮೆಂಟ್ ಮಾಡ

ಬೇಕೆಂದು ಸರ್ಕಾರಕ್ಕೆ ಹೇಳಿದ್ದರೂ ಇದುವರೆಗೂ ಮಾಡಿಲ್ಲ. ಅಲ್ಲಿ ಏನಾದರೂ ಅನಾಹುತವಾದರೆ ಅದಕ್ಕೆ ಸರ್ಕಾರದವರು ಜವಾಬ್ದಾರಿಯಾಗುತ್ತಾರೆಯೇ? ಮಾನ ಅಧ್ಯಕ್ಷರು ಸ್ಟೇಟ್‌ಮೆಂಟ್ ಮಾಡುವ ಬಗ್ಗೆ ಸರ್ಕಾರಕ್ಕೆ ಮತ್ತೊಮ್ಮೆ ಆಜ್ಞೆ ಮಾಡುತ್ತೀರಾ?

ಶ್ರೀ ಎ.ಬಿ. ಜಕನೂರ್.—ಮಾನ್ಯ ಸಹಕಾರ ಮಂತ್ರಿಗಳು ಹೇಳಿದ್ದಾರೆ, ಏನೆಂದರೆ the matter comes under section 70 of the Co-operative Societies Act and it will be a dispute. ಎಂದು ಆದಕಾರಣ ಇದನ್ನು ವಿಚಾರ ಮಾಡಿ ನಾಳೆ ಹೇಳುತ್ತೇನೆ ಎಂದು ಅವರು ಹೇಳಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮಂತ್ರಿಗಳು ಸಂಬಂಧಪಟ್ಟ ಅಧಿಕಾರಿಗಳನ್ನು ಕಾಂಟಾಕ್ಟ್ ಮಾಡಿ ಸಾಯಂಕಾಲದೊಳಗೆ ಸ್ಟೇಟ್‌ಮೆಂಟ್ ಮಾಡುತ್ತೇನೆ ಎಂದು ಹೇಳಿದ್ದರು. ಅಲ್ಲಿಂದ ಬಂದಿದ್ದ ಟೆಲಿಗ್ರಾಮನ್ನೂ ಸಹ ತಮ್ಮ ಮುಖಾಂತರ ಸರಕಾರಕ್ಕೆ ಕೊಟ್ಟಿದ್ದೇವೆ. ನಾಳೆ ಸಾಯಂಕಾಲ ೫ ಗಂಟೆಗೆ ಚುನಾವಣೆ ಇದೆ. The Secretary has sought the advice of the Government. What the advice the Government has given. Whether they have authorised him to postpone the meeting. ನಾವು ಎಲೆಕ್ಷನ್ ಬಗ್ಗೆ ಪ್ರಶ್ನೆ ಮಾಡುತ್ತಿಲ್ಲ. ಸಕ್ಷನ್ ೭೦ರ ಕೆಳಗೆ ಅದು ಡಿಸ್ಪ್ಯೂಟ್ ಆಗುತ್ತದೆ. We are not worried about it. The Secretary is a Government Officer and he was asked to postpone the meeting and he sought clarification. ಆದ್ದರಿಂದ ಕಾರ್ಯದರ್ಶಿಯವರಿಗೆ ಏನು ಇನ್‌ಸ್ಟ್ರಕ್ಷನ್ ಕೊಟ್ಟಿದೆ ಎಂಬುದು ಮುಖ್ಯ. ನಾಳೆ ಸಾಯಂಕಾಲ ೫ ಗಂಟೆಗೆ ಚುನಾವಣೆ ಇದೆ. The Hon'ble Minister said-I will contact the officers and make a statement in the evening. ಇದು ಚುನಾವಣೆ ವಿಚಾರವಾಗಿರುವುದರಿಂದ ಅಲ್ಲಿಗೆ ಕಾಂಟಾಕ್ಟ್ ಮಾಡಿ ನಮಗೆ ವಿಚಾರ ಹೇಳಿದ್ದರೆ ಚೆನ್ನಾಗಿತ್ತು. I have passed on the copy of the message.

ಅಧ್ಯಕ್ಷರು.—ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಏನು ಹೇಳುತ್ತಾರೆ?

SRI D. DEVARAJ URS (Chief Minister).—Sir, I am sorry I was not present at that time. Whatever it may be, elections ought to take place in the evening. By tomorrow, by the time we come here, I think I will ask the Minister to be ready with the Statement.

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಶ್ರೀಮಾನ್ ಜಿ.ಕೆ. ತೆಕ್ಕೇಡ್ ಅವರು ಮಾತನಾಡುವಾಗ ಕೆಲವು ಪದಗಳನ್ನು ಉಪಯೋಗಿಸಿದ್ದಾರೆ. ಆದಕ್ಕಿಂತ ಮುಂದೆ ೧೯೬೩ನೇ ಇಸವಿ ಡಿಸೆಂಬರ್ ತಿಂಗಳಲ್ಲಿ ಕರ್ನಾಟಕ ವಿಧಾನ ಸಭೆಯ ಮಾಜಿ ಅಧ್ಯಕ್ಷರಾಗಿದ್ದ ದಿವಂಗತ ಶ್ರೀ ವೈಕುಂಠ ಬಾಳಿಗಾರವರು ಒಂದು ರೂಲಿಂಗ್ ಕೊಟ್ಟಿರುವುದನ್ನು ಸಭೆಯ ಗಮನಕ್ಕೆ ತರುತ್ತಿದ್ದೇನೆ. ಅದು ಹೀಗಿದೆ.

> "I definitely rule that criticism of the Central Government is not correct and it is absolutely wrong and I will not permit criticism of the functions of the Central Government. It is for the hon. Member to understand."
> ಎಂದು;

ಮಾನ್ಯ ಸದಸ್ಯರು ಒಂದು ಕಥೆ ಹೇಳುತ್ತೇನೆ ಎಂದು ಹೇಳಿ ನಂತರ ಉಪಯೋಗಿಸಿದ ಕೆಲವು ಪದಗಳನ್ನು ನಾನು ಅಧಿಕೃತ ದಾಖಲೆಗಳಿಂದ ಎಕ್ಸ್‌ಪಂಜ್ ಮಾಡಿದ್ದೇನೆ.

Now the House stands adjourned to meet tomorrow at 12 noon.

The House adjourned at Five minutes past Seven of the Clock to meet again at Twelve of the Clock on Friday the 28th July 1978.